**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,</u>**

**<u>ಪೊನ್ನಂಪೇಟೆ</u>**

ಸಿ.ಸಿ. ನಂ. **176/2022** ಪ್ರಾ.ಸಾ **– 1**

<u>ದಿನಾಂಕಃ **15.11.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

| | | |
|---|---|---|
| ಸಾಕ್ಷಿಯ ಹೆಸರು | : | ಶಿವಮ್ಮ |
| ಗಂಡನ ಹೆಸರು | : | ಪ್ರಕಾಶ್ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ ಸ್ಥಳ | : | ಪೊನ್ನಂಪೇಟೆ |

<u>ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ. ಎಂ. ಹೆಚ್. ಎನ್ ವಕೀಲರಿಂದಃ-</u>

PW 1 ನನಗೆ ಪೊನ್ನಪ್ಪನವರಿಂದ ಪರಿಚಯ. ಸಬಿತಾ ಪೊನ್ನಪ್ಪ W/o ಇಟ್ಟಿರಾ ಪೊನ್ನಪ್ಪ. ನಾನು ಮತ್ತು ಸಬಿತಾರವರು ಸಹಕಾರ ಸಂಘಗಳಾದ Fincare, L & T, ಸಂಸ್ಥೆ ಸಂಘ ದಲ್ಲಿ ಒಟ್ಟಿಗೆ ಸದಸ್ಯರಾದೆವು, ಆಗಲಿಂದಲೇ ನನಗೆ ಇವರು ಪರಿಚಯವಾಗಿದ್ದು. ಸಬಿತಾರವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಕವಿತಾ ರವರಿಂದ ಸಂಘದಲ್ಲಿ ಸದಸ್ಯರಾಗಲು ಬಂದಿದ್ದಾಗ ಪರಿಚಯವಾದರು. ಸಬಿತಾರವರು ಈ ಸಂಘಗಳಿಂದ ಸಾಲ ತೆಗೆದುಕೊಂಡರು. ನಾನು ಅವರಿಗೆ ಸಾಲ ಕೊಡಿಸಿದ್ದೆ, ನಾನೇ ಜಾಮೀನುದಾರಳಾಗಿದ್ದೆ. ಆಗ 3 ಚೆಕ್ ಅನ್ನು ಸಂಘಗಳಿಗೆ ಕೊಟ್ಟಿದ್ದೆ. ಅವರ ಗಂಡ ತೀರಿಕೊಂಡು ಸಾಲ ಮನ್ನಾವಾಯಿತು. ಸಂಘವು ನನ್ನ ಚೆಕ್‌ಗಳನ್ನು PW 1 ರವರಿಗೆ ಕೊಟ್ಟಿದ್ದು ಅದನ್ನು ದುರುಪಯೋಗಪಡಿಸಿಕೊಂಡಿದ್ದರು. PW 1 ಅವರ ಮಗಳು ಪೂಣಚ್ಚ ರವರು ದುರುಪಯೋಗ ಮಾಡಿಕೊಂಡರು. ಪೂಣಚ್ಚ ರವರು 2 ಪ್ರಕರಣಗಳು ಹಾಕಿದ್ದಾರೆ. ಪೂಣಚ್ಚರವರು ಸಬೀತಾರವರ ಅಕ್ಕನ ಗಂಡ.

**CC. No.176/2022** **PW – 1**

ಸಬೀತಾರವರ ಗಂಡ ತೀರಿಕೊಂಡ ನಂತರ ಸಬೀತಾ, ಪೂಣಚ್ಚ, ಶ್ರೆಯಾ ಮೂರು ಜನರು ಬಂದು ಸಬೀತಾ ಗಂಡ, ಪೊನ್ನಪ್ಪ ರವರಿಗೆ ಹಣ ಕೊಡಬೇಕು ಎಂದು ಕೇಳಿ ಗಲಾಟೆ ಮಾಡಿರುತ್ತಾರೆ. ಬಲವಂತವಾಗಿ ಲಾಕ್ ಡೌನ್ ಸಮಯ ನನ್ನಿಂದ ಒಂದು ಅಗ್ರಿಮೆಂಟ್ ಮಾಡಿಸಿಕೊಂಡಿದ್ದಾರೆ. ಖಾಲಿ ಸ್ಟ್ಯಾಂಪ್ ಪತ್ರಕ್ಕೆ ನನ್ನ ಸಹಿಪಡೆದರು.. ಎಲ್ಲ ಕಡೆ ನನ್ನ ಮೇಲೆ ಸುಳ್ಳು ದೂರು ಕೊಟ್ಟಿದ್ದಾರೆ. ನಾನು ಇವರಿಂದ ಯಾವುದೇ ಸಾಲ ಪಡೆದಿಲ್ಲ, ಆದ್ದರಿಂದ ದೂರು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ನನ್ನ ಮೇಲೆ ಕೊಟ್ಟಂತಹ ದೂರುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ. ಡಿ. 1 ರಿಂದ 3 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಫಿರ್ಯಾದುದಾರರ ಪರ ವಕೀಲರು ಪಾಟೀ ಸವಾಲಿಗೇ ಸಮಯ ಕೋರಿದ್ದು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ